ತಾರೀಖು 22ನೆ ಜೂ. 1907.

ಕ್ಯಾಂಪು ನಂ. 9, ಮೊದಲನೆ ತರಗತಿಯ ಡೆಪ್ಯುಟಿ ಕಮಿಷನರಾದ ಮಿ। ಎಚ್. ಎಚ್. ಸ್ಪಾರ್ಕ್ಸ್‌ರವರನ್ನು, 1907ನೆ ಇಸವಿಯ ಜುಲೈ 1ನೆ ತಾರೀಖು ಮೊದಲುಗೊಂಡು ಎಕ್ಸೈಜ್ ಕಮಿಷನರ್ ರಿಜಿಸ್ಟ್ರೇರ್ ಅಂಡ್ ಸೆಕ್ರೆಟರಿ ಜನರಲ್ ಮತ್ತು ಉದ್ಯೋಗ ಪ್ರಯುಕ್ತವಾದ ಸ್ಟ್ಯಾಂಪು ಕಮಿಷನರಾಗಿ ಮೊಕರರ್ರಾಡಿದೆ.

ತಾರೀಖು 25ನೆ ಜೂ. 1907.

ನಂ. 12137—ಎಲ್. ಬಿ. 473-06—3, ಸ. 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಇದರಡಿ ವಿವರಿಸಿರುವ ಮತ್ತು 1 ಎಕರೆ ಮತ್ತು 22 ಗುಂಟೆಗಳ ವಿಸ್ತೀರ್ಣವುಳ್ಳ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಮಲ್ಲತಹಳ್ಳಿ ಗ್ರಾಮದಲ್ಲಿ ಹೊಸಗ್ರಾಮ ನಿವೇಶನಕ್ಕಾಗಿ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (ಬಿ) ಪ್ರಕರಣಗಳನ್ನನುಸರಿಸಿ ದೊಡ್ಡಬಳ್ಳಾಪುರ ಸಬ್ ಡಿವೀಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರಕೊಟ್ಟಿದೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರನ ಹೆಸರು	ಸರ್ವೆ ನಂ.	ಖರಾಬು ಅಥವಾ ಬಿಡಾಯಿತು	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ	ಚತುರ್ಗಡಿ.			
								ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಬೆಂಗಳೂರು	ದೊಡ್ಡಬಳ್ಳಾಪುರ	ಈಸೂರು	ಮಲ್ಲತಹಳ್ಳಿ	ನಂಜುಂಡ	2	ಬಿಡಾಯಿತು	ಎ. 1 ಗು. 22 ಇದರಲ್ಲಿ 6 ಗುಂಟೆಗಳಷ್ಟು ಖರಾಬು 9-8-0 ರೂ. ಕಂದಾಯ ದಾಖಲಾಗಿದೆ.	ಸರ್ವೆ ನಂಬರು 3.	ಸರ್ವೆ ನಂಬರು 1.	ಜಡ್ಡಿಹಳ್ಳಿ ಗ್ರಾಮದ ಸೀಮೆ	ಮಲ್ಲತಹಳ್ಳಿ ಗ್ರಾಮದ ಸೀಮೆ

ತಾರೀಖು 25ನೆ ಜೂ. 1907.

ನಂ. 12160—ಮ್ಯು. 509-06, ಮಿ। ಎ. ಕೋದಂಡಪಾಣಿ ಮೊದಲಿಯಾರ್, ಎಲ್. ಎಂ. ಎಸ್., ಡಿ. ಪಿ. ಎಚ್., ರವರನ್ನು ಬೆಂಗಳೂರು ಪಟ್ಟಣದ ಹೆಲ್ತ್ ಆಫಿಸರಾಗಿಯೂ, ಮಿ। ಬಿ. ಕೃಷ್ಣರಾವ್, ಎಲ್. ಎಂ. ಎಸ್., ಎಲ್. ಎಸ್. ಎಸ್., ಯವರನ್ನು ಮೈಸೂರು ಪಟ್ಟಣದ ಹೆಲ್ತ್ ಆಫಿಸರಾಗಿಯೂ ಮೊಕರರ್ರಾಡಿದೆ.

ತಾರೀಖು 26ನೆ ಜೂ. 1907.

ನಂ. ಜೆ. 3840—ಕೋರ್ಟ್ಸ್. 275-06—3, ಮಿ। ಕೆ. ಎಸ್. ಚಂದ್ರಶೇಖರ ಐಯ್ಯರ್, ಬಿ. ಎ., ಬಿ. ಎಲ್., ರವರು ತಮಗೆ ನೇಮಕವಾಗಿದ್ದ ಚೀಫ್ ಕೋರ್ಟಿನ ಜಡ್ಜಿಯ ಉದ್ಯೋಗವನ್ನು ಇದೇ ತಿಂಗಳು 17ನೆ ತಾರೀಖಿನ ಪೂರ್ವಾಹ್ನ ಜಲ್ಲಿ ವಹಿಸಿದರು.

ತಾರೀಖು 26ನೆ ಜೂ. 1907.

ನಂ. ಜೆ. 3843—ಕೋರ್ಟ್ಸ್. 274-06—2, 1907ನೆ ಇಸವಿಯ ಜುಲೈ 1ನೆ ತಾರೀಖಿನಿಂದ ಮತ್ತು ಆ ತರುವಾಯ ಶಿವಮೊಗ್ಗ ಸಬಾರ್ಡಿನೇಟ್ ಜಡ್ಜಿಯ ಕೋರ್ಟಿನ ಅಧಿಕಾರಸ್ಥಹದ್ದು, ಶಿವಮೊಗ್ಗ, ಚಿತ್ರದುರ್ಗ ಮತ್ತು ಕಡೂರು ರೆವಿನ್ಯೂ ಡಿಸ್ಟ್ರಿಕ್ಟುಗಳಿಗೆಲ್ಲಾ ವ್ಯಾಪಿಸತಕ್ಕದ್ದೆಂದು 1883ನೆ ಇಸವಿಯ ಮೈಸೂರು ಸಿವಿಲ್ ಕೋರ್ಟ್ಸ್ ರೆಗ್ಯುಲೇಷನಿನ 5ನೆ ಪ್ರಕರಣದ ಪ್ರಕಾರ ವಿಧಿಸಲು ಮೈಸೂರು ಶ್ರೀಮಂತ ಮಹಾರಾಜರವರ ಸರ್ಕಾರದವರು ಅಪ್ಪಣೆ ದಯಪಾಲಿಸಿರುತ್ತಾರೆ.